ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE :25/07/2020

ಶಾಸಕರ ಧರಣಿಗೆ ರಾಜ್ಯಪಾಲರ ಅಸಮಾಧಾನ | ತುರ್ತು ಅಧಿವೇಶನಕ್ಕೆ ನಕಾರ

# ರಾಜಭವನದಲ್ಲಿ ಕಾಂಗ್ರೆಸ್ ಹೈಡ್ರಾಮಾ

ವಿ.ಕ. 25-7-2020

[illegible]

**ಜೈಪುರ:** ದಿನದಿಂದ ದಿನಕ್ಕೆ ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಗುತ್ತಿರುವ ರಾಜಸ್ಥಾನದ ರಾಜಕೀಯ ಬೆಳವಣಿಗೆಯು ಶುಕ್ರವಾರ ರಾಜ್ಯಪಾಲ ಕಲ್ರಾಜ್ ಮಿಶ್ರಾ ಮತ್ತು ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ನಡುವಿನ ಸಂಘರ್ಷವಾಗಿ ಹೊಸ ಸ್ವರೂಪ ಪಡೆದಿದೆ.

ಸರಕಾರದ ಆಯಸ್ಸನ್ನು ಆರು ತಿಂಗಳಾದರೂ ವೃದ್ಧಿಸಿಕೊಳ್ಳುವ ಉದ್ದೇಶದಿಂದ ತರಾತುರಿಯಲ್ಲಿ ವಿಧಾನಸಭೆ ಅಧಿವೇಶನ ಕರೆದು ಬಹುಮತ ಸಾಬೀತುಪಡಿಸುವ ಗೆಹ್ಲೋಟ್ ಅವರ ಪ್ರಯತ್ನಕ್ಕೆ ರಾಜ್ಯಪಾಲರು ಹಸಿರು ನಿಶಾನೆ ತೋರಿಸುತ್ತಿಲ್ಲ. ಗುರುವಾರ ಸಂಜೆ ರಾಜ್ಯಪಾಲರನ್ನು ಭೇಟಿ ಮಾಡಿ ವಿಧಾನಸಭೆ ಅಧಿವೇಶನ ಕರೆಯುವಂತೆ ಮನವಿ ಮಾಡಿದ್ದ ಗೆಹ್ಲೋಟ್ ಅವರು ಶುಕ್ರವಾರ ತಮ್ಮ ಬೆಂಬಲಕ್ಕೆ ನಿಂತಿರುವ 100 ಶಾಸಕರನ್ನು ನಾಲ್ಕು ಬಸ್‌ಗಳಲ್ಲಿ ರಾಜಭವನಕ್ಕೆ ಕರೆದೊಯ್ದು ಒತ್ತಡ ಹೇರುವ ತಂತ್ರ ಅನುಸರಿಸಿದರು. ಅಲ್ಲದೆ, "ರಾಜ್ಯಪಾಲರು ಮೇಲಿನವರ ಒತ್ತಡಕ್ಕೆ ಮಣಿದು ವಿಧಾನಸಭೆ ಅಧಿವೇಶನ ಕರೆಯುವ ವಿಚಾರವಾಗಿ ಯಾವುದೇ ತೀರ್ಮಾನ ಕೈಗೊಳ್ಳುತ್ತಿಲ್ಲ," ಎಂದೂ ಆರೋಪಿಸಿದರು.


[illegible]

ವಿಧಾನಸಭೆ ಅಧಿವೇಶನಕ್ಕೆ ಆಗ್ರಹಿಸಿ ಶಾಸಕರು ರಾಜಭವನದ ಹುಲ್ಲುಹಾಸಿನ ಮೇಲೆ ಕುಳಿತು ಐದು ತಾಸು ಧರಣಿ ನಡೆಸಿದರು. "ಅಧಿವೇಶನ ಕರೆಯಲು ಸಿ.ಎಂ. ಅವರ ಸರಕಾರದಿಂದ ಕೆಲವು ಸ್ಪಷ್ಟನೆ ಬೇಕು" ಎಂದು ರಾಜ್ಯಪಾಲರು ತಿಳಿಸಿದ ಬಳಿಕ ಶಾಸಕರು ಧರಣಿ ಕೊನೆಗೊಳಿಸಿದರು.

ಅಷ್ಟಕ್ಕೆ [illegible] ಮುಕ್ತಿ [illegible]. ಶಾಸಕರ ಧರಣಿ ಕುರಿತು ಅಸಮಾಧಾನ ವ್ಯಕ್ತಪಡಿಸಿ ರಾಜ್ಯಪಾಲರು ಮುಖ್ಯಮಂತ್ರಿ ಗೆಹ್ಲೋಟ್ ಅವರಿಗೆ ಪತ್ರ ಬರೆದರು. ಬಳಿಕ ಗೆಹ್ಲೋಟ್ ತಮ್ಮ ನಿವಾಸದಲ್ಲಿ ಸಚಿವ ಸಂಪುಟದ ತುರ್ತು ಸಭೆ ನಡೆಸಿ, ಮುಂದಿನ ನಡೆ ಬಗ್ಗೆ [illegible]


ಜೈಪುರದಲ್ಲಿರುವ ರಾಜಭವನ ಆವರಣದಲ್ಲಿ ಶುಕ್ರವಾರ ಧರಣಿ ಆರಂಭಿಸಿದ ಕಾಂಗ್ರೆಸ್ ಶಾಸಕರ ಜತೆ ರಾಜಸ್ಥಾನ ರಾಜ್ಯಪಾಲ ಕಲ್ರಾಜ್ ಮಿಶ್ರಾ ಮಾತುಕತೆ ನಡೆಸಿದರು.

## ಬಹುಮತ ಸಾಬೀತಿಗೆ ತರಾತುರಿ ಏಕೆ?

ಪೈಲಟ್ ಮತ್ತು 18 ಶಾಸಕರನ್ನು ಅನರ್ಹಗೊಳಿಸಿ ಸದನದ ಸಂಖ್ಯಾಬಲವನ್ನೇ ಇಳಿಸುವ ಯೋಜನೆಗೆ ಯಶಸ್ಸು ಸಿಗುವುದಿಲ್ಲ ಎನ್ನುವುದು ಸಿಎಂ ಅಶೋಕ್ ಗೆಹ್ಲೋಟ್ ಅವರಿಗೆ ಮನವರಿಕೆಯಾಗಿದೆ. ಸೋಮವಾರ (ಜುಲೈ 27) ಸುಪ್ರೀಂ ಕೋರ್ಟ್‌ನಲ್ಲಿ ಶಾಸಕರ ಅನರ್ಹತೆ ನೋಟಿಸ್ ಅರ್ಜಿ ವಿಚಾರಣೆಗೆ ಬರಲಿದೆ. ಒಮ್ಮೆ ಅನರ್ಹತೆ ನೋಟಿಸ್ ನೀಡಿರುವ ಸ್ಪೀಕರ್ ಕ್ರಮವನ್ನು ಕೋರ್ಟ್ ರದ್ದುಪಡಿಸಿದರೆ, ವಿಶ್ವಾಸಮತ ಯಾಚನೆ ಸಂದರ್ಭದಲ್ಲಿ ಗೆಹ್ಲೋಟ್ ಸರಕಾರ ಪತನವಾಗುವ ಸಾಧ್ಯತೆ ಇದೆ. ಸದ್ಯದ ಸ್ಥಿತಿಯಲ್ಲಿ ಬಹುಮತದ ಸಂಖ್ಯೆ 101. ಗೆಹ್ಲೋಟ್‌ಗೆ 103 ಶಾಸಕರ ಬೆಂಬಲವಿದೆ. ಅದರಲ್ಲಿ 'ಕಿಂಗ್ ಮೇಕರ್' ಎನಿಸಿಕೊಂಡಿರುವ ಭಾರತೀಯ ಟ್ರೈಬಲ್ ಪಾರ್ಟಿಯ ಇಬ್ಬರು ಹಾಗೂ 10 ಮಂದಿ ಪಕ್ಷೇತರರಿದ್ದಾರೆ. ಈ 12 ಶಾಸಕರೇ ನಿರ್ಣಾಯಕ. ಕೊನೆಕ್ಷಣದಲ್ಲಿ [illegible] ಶಾಸಕರು ನಿಷ್ಠೆ ಬದಲಿಸಿದರೂ ಸರಕಾರ ಉರುಳುತ್ತದೆ. ಹೀಗಾಗಿ ಸುಪ್ರೀಂ ಕೋರ್ಟ್ ತೀರ್ಪು ಬರುವುದರೊಳಗೆ ಬಹುಮತ ಸಾಬೀತುಪಡಿಸುವುದು ಗೆಹ್ಲೋಟ್ ತಂತ್ರ. ಒಮ್ಮೆ ಬಹುಮತ ಸಾಬೀತುಪಡಿಸಿದರೆ ಮತ್ತೆ ಆರು ತಿಂಗಳವರೆಗೆ ಅವರ ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವಂತಿಲ್ಲ.

[illegible]

ಪ್ರತಿಭಟನಾನಿರತ ಕಾಂಗ್ರೆಸ್ ಶಾಸಕರು ರಾಜಭವನದಿಂದ ತೆರಳಿದ ಬಳಿಕ ರಾಜ್ಯಪಾಲ ಕಲ್ರಾಜ್ [illegible]

ವಿಧಾನಸಭೆ ಸ್ಪೀಕರ್ ನೀಡಿದ್ದ ಅನರ್ಹತೆ ನೋಟಿಸ್‌ಗೆ ಸಂಬಂಧಿಸಿ ಸೋಮವಾರದವರೆಗೆ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ರಾಜಸ್ಥಾನ ಹೈಕೋರ್ಟ್ ಶುಕ್ರವಾರ ಆದೇಶಿಸಿದೆ. ಹೀಗಾಗಿ ಅಲ್ಲಿಯವರೆಗೆ ಅನರ್ಹತೆಯ ತೂಗುಕತ್ತಿಯಿಂದ ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಮತ್ತು ಅವರ ಬೆಂಬಲಿಗ ಶಾಸಕರು ಪಾರಾಗಿದ್ದಾರೆ. ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ವಿರುದ್ಧ ಬಂಡೆದ್ದಿರುವ ಕಾರಣಕ್ಕೆ ಸ್ಪೀಕರ್ ಸಿ.ಪಿ.ಜೋಶಿ ಅವರು ಜುಲೈ 14ರಂದು ನೀಡಿದ್ದ ಅನರ್ಹತೆ ನೋಟಿಸ್‌ನ ಸಾಂವಿಧಾನಿಕ ಮಾನ್ಯತೆಯನ್ನು ಪೈಲಟ್ ಮತ್ತು 18 ಶಾಸಕರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಾಲಯವು ಶುಕ್ರವಾರ ತೀರ್ಪು ನೀಡುವುದಾಗಿ ಘೋಷಿಸಿತ್ತು. "ಸ್ಪೀಕರ್ ಕಾರ್ಯವ್ಯಾಪ್ತಿಯಲ್ಲಿ ಕೋರ್ಟ್ ಮಧ್ಯಪ್ರವೇಶ ಸಮಂಜಸವಲ್ಲ," ಎಂದು ಸ್ಪೀಕರ್ ಬುಧವಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ರಾಜಸ್ಥಾನ ಹೈಕೋರ್ಟ್ ತೀರ್ಪು ಪ್ರಕಟಿಸಬಹುದು, ಆದರೆ ಅದು ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಗುರುವಾರ ಆದೇಶ ನೀಡಿತ್ತಲ್ಲದೆ ವಿಚಾರಣೆಯನ್ನು ಜುಲೈ 27ಕ್ಕೆ ಮುಂದೂಡಿತ್ತು. ಹೀಗಾಗಿ ಸುಪ್ರೀಂ ವಿಚಾರಣೆ ಆರಂಭವಾಗುವವರೆಗೆ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಹೈಕೋರ್ಟ್ ಆದೇಶಿಸಿದೆ.

ಕೇವಲ 20-25 ಶಾಸಕರನ್ನು ಇಟ್ಟುಕೊಂಡು ಸಿಎಂ ಆಗಲಾರಿರಿ. ಸಿಎಂ ಆಗುವ ಹಂಬಲವಿದ್ದರೆ ಪ್ರತಿಭಟನೆ ಬಿಟ್ಟು ನೇರವಾಗಿ ಹೇಳಿ. ಬಿಜೆಪಿ ಸೇರುವುದಿಲ್ಲವಾದರೆ ಹರಿಯಾಣದಲ್ಲಿ ವಾಸ್ತವ್ಯ ಹೂಡಿರುವುದೇಕೆ?
- ಕಪಿಲ್ ಸಿಬಲ್ ಕಾಂಗ್ರೆಸ್ ನಾಯಕ

ನನ್ನ ಬಳಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ [illegible]
- [illegible]